# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(1ಬಿ)ಪಿಆರ್/36/2019–20

ಆಯುಕ್ತರವರ ಕಛೇರಿ,
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 26–12–2019.

## ಕಛೇರಿ ಆದೇಶ

ವಿಷಯ: ಬಿಬಿಎಂಪಿ 8 ವಲಯಗಳ ಉಸ್ತುವಾರಿಯನ್ನು ವಿಶೇಷ ಆಯುಕ್ತರು ಮತ್ತು ಅಪರ ಆಯುಕ್ತರಿಗೆ ವಹಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ: ನಅಇ 112 ಎಂಎನ್‌ಯು 2019, ದಿನಾಂಕ: 16–09–2019.

2) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 112 ಎಂಎನ್‌ವೈ 2019, ದಿನಾಂಕ: 16–09–2019.

3) ಈ ಕಛೇರಿ ಸಮಸಂಖ್ಯೆಯ ದಿನಾಂಕ: 25–09–2019ರ ಆದೇಶ.

4) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 112 ಎಂಎನ್‌ವೈ 2019, ದಿನಾಂಕ: 23–12–2019.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆ.ಎಂ.ಸಿ. ಕಾಯ್ದೆಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಬಿಬಿಎಂಪಿಯ ಆಯುಕ್ತರ ಕಾರ್ಯದ ಹೊರೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಬಿಬಿಎಂಪಿಯ 8 ವಲಯಗಳನ್ನು ಆಯುಕ್ತರ ಕಾರ್ಯಪರಿಧಿಯಿಂದ ಬಿಡುಗಡೆಗೊಳಿಸಿ ಬಿಬಿಎಂಪಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಒಟ್ಟು 4 ವಿಶೇಷ ಆಯುಕ್ತರು ಮತ್ತು ಅಪರ ಆಯುಕ್ತರಿಗೆ ತಲಾ 2 ವಲಯಗಳಂತೆ ಉಲ್ಲೇಖ–(1)ರಂತೆ ನೀಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬಿಬಿಎಂಪಿಯ 8 ವಲಯಗಳ ಉಸ್ತುವಾರಿಯನ್ನು ಉಲ್ಲೇಖ–(2)ರ ಅಧಿಸೂಚನೆಯಲ್ಲಿ ವಿಶೇಷ ಆಯುಕ್ತರು ಮತ್ತು ಅಪರ ಆಯುಕ್ತರಿಗೆ ನೀಡಲಾಗಿರುವುದನ್ನು ಪರಿಗಣಿಸಿ, ಉಲ್ಲೇಖ–(3)ರ ಕಛೇರಿ ಆದೇಶದಲ್ಲಿ ವಿಶೇಷ ಆಯುಕ್ತರು ಮತ್ತು ಆಯುಕ್ತರಿಗೆ ವಲಯಗಳ ಉಸ್ತುವಾರಿಯನ್ನು ನೀಡಲಾಗಿರುತ್ತದೆ.

ಪ್ರಸ್ತುತ, ಸರ್ಕಾರವು ಉಲ್ಲೇಖ–(4)ರ ಅಧಿಸೂಚನೆಯಲ್ಲಿ ಆಡಳಿತಾತ್ಮಕ ಕಾರಣಗಳಿಗಾಗಿ ದಿನಾಂಕ: 16–09–2019ರ ಸಮಸಂಖ್ಯೆಯ ಅಧಿಸೂಚನೆಯನ್ನು ಮಾರ್ಪಡಿಸಿ, ಬಿಬಿಎಂಪಿ.,ಯ 8 ವಲಯಗಳ ಉಸ್ತುವಾರಿಯನ್ನು ಮರು ಹಂಚಿಕೆ ಮಾಡಲಾಗಿರುವುನ್ನು ಪರಿಗಣಿಸಿ, ಈ ಕೆಳಕಂಡ ಅಧಿಕಾರಿಗಳಿಗೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ವಲಯಗಳ ಉಸ್ತುವಾರಿಯನ್ನು ಮರು ಹಂಚಿಕೆ ಮಾಡಿ ಆದೇಶಿಸಿದೆ.

| ಕ್ರ.ಸಂ. | ಅಧಿಕಾರಿಯ ಹೆಸರು ಮತ್ತು ಪದನಾಮ | ಉಸ್ತುವಾರಿ ನೀಡಲಾಗಿರುವ ವಲಯಗಳು |
|---|---|---|
| 1. | ಶ್ರೀ ರವಿಕುಮಾರ್ ಸುರಪೂರ, ಭಾ.ಆ.ಸೇ., ವಿಶೇಷ ಆಯುಕ್ತರು (ಯೋಜನೆ) | ಪೂರ್ವ ಮತ್ತು ಯಲಹಂಕ |
| 2. | ಶ್ರೀ ಎಂ. ಲೋಕೇಶ್, ಭಾ.ಆ.ಸೇ., ವಿಶೇಷ ಆಯುಕ್ತರು (ಹಣಕಾಸು ಮತ್ತು ಮಾಹಿತಿ ತಂತ್ರಜ್ಞಾನ) | ದಕ್ಷಿಣ ಮತ್ತು ದಾಸರಹಳ್ಳಿ |

| | | |
|---|---|---|
| 3. | ಶ್ರೀ ವಿ. ಅನ್ಬುಕುಮಾರ್, ಭಾ.ಆ.ಸೇ.,<br>ಅಪರ ಆಯುಕ್ತರು (ಆಡಳಿತ) | ರಾಜರಾಜೇಶ್ವರಿನಗರ ಮತ್ತು ಬೊಮ್ಮನಹಳ್ಳಿ |
| 4. | ಶ್ರೀ ಡಿ. ರಂದೀಪ್, ಭಾ.ಆ.ಸೇ.,<br>ಅಪರ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) | ಮಹದೇವಪುರ |
| 5. | ಡಾ|| ಬಸವರಾಜು ಎಸ್., ಭಾ.ಆ.ಸೇ.,<br>ವಿಶೇಷ ಆಯುಕ್ತರು (ಕಂದಾಯ) | ಪಶ್ಚಿಮ ವಲಯ |

ಮಾನ್ಯ ಆಯುಕ್ತರವರ ಆದೇಶದಂತೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
: ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
: ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಯೋಜನೆ / ಹಣಕಾಸು ಮತ್ತು ಮಾಹಿತಿ ತಂತ್ರಜ್ಞಾನ) / ಅಪರ ಆಯುಕ್ತರು (ಆಡಳಿತ / ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರಿಗೆ ಹಾಗೂ ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕೋರಿದೆ.
: ಸರ್ಕಾರದ ಅಧೀನ ಕಾರ್ಯದರ್ಶಿಯವರು, ಸಿಆಸು ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿದೆ.
: ಸರ್ಕಾರದ ಅಧೀನ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿದೆ.
: ಸರ್ಕಾರದ ಅಧೀನ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿದೆ.
: ಎಲ್ಲಾ ವಲಯಗಳ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
: ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಕಳುಹಿಸಿದೆ.
: ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸಿದೆ.
: ಮಾಹಿತಿ ಮತ್ತು ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
: ಕಛೇರಿ ಪ್ರತಿ.